# ಸ್ವಾಮಿ ಗಂಭೀರಾನಂದ (೧೮೯೯-೧೯೮೮)

**(ರಾಮಕೃಷ್ಣ ಮಹಾಸಂಘದ ೧೧ನೇ ಪರಮಾಧ್ಯಕ್ಷರು)**

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೩**

*(ಈ ಭಾಗವು 'ಸ್ವಾಮಿ ಗಂಭೀರಾನಂದ: ಏಕ್ ಮಹಾ ಜೀವನೇರ್ ಕಥಾ' ಎಂಬ ಪುಸ್ತಕದ ಪೀಠಿಕೆ.)*

ದೇಹವನ್ನು ತ್ಯಜಿಸಿ ನಾಮ-ರೂಪಗಳ ಕಟ್ಟಳೆಗಳನ್ನು ಮೀರಿರುವ ಅವರನ್ನು ನಾಮ-ರೂಪಗಳ ನಡುವೆ ಮತ್ತೊಮ್ಮೆ ಸೆಳೆದು ಅವರ ಗುಣಗಾನವನ್ನು ಮಾಡುವುದು ಶೋಭಿಸುವುದೂ ಇಲ್ಲ, ಅದು ತರವೂ ಅಲ್ಲ. ಆದರೆ ಮಾನವನ ಮನಸ್ಸು ಮಾಯೆ-ಮಮತೆ, ಶ್ರದ್ಧೆ-ಪ್ರೇಮ-ಪ್ರೀತಿಗಳಿಂದ ಬಂಧಿಸಲ್ಪಟ್ಟಿದ್ದು, ಆತನು ತನ್ನ ಪ್ರಿಯಜನರನ್ನು ಸ್ಮೃತಿಗಳ ಸರಳಿನಿಂದ ಬಿಗಿದಿಟ್ಟುಕೊಳ್ಳಲು ಪ್ರಯತ್ನಿಸುತ್ತಾನೆ.

ಮನನಶೀಲನಾದ ಮಾನವನು ಮನನದ ಅಧಿಕಾರಿಯಾಗಿದ್ದು ಅವನ ಮನಃಪಟಲದ ಮೇಲೆ ವೃತ್ತಿಗಳು ಪ್ರವಹಿಸುತ್ತವೆ. ಈ ವೃತ್ತಿಗಳು ಚಿತ್ತದ ಮೇಲೆ ಬಿದ್ದಾಗ ಅವು ಸಂಸ್ಕಾರಗಳಾಗಿ ಇವುಗಳಿಂದ ಮತ್ತೆ ವೃತ್ತಿಗಳುಂಟಾಗುತ್ತವೆ. ಅನೇಕ ಚಿತ್ತವೃತ್ತಿಗಳ ಸಮೂಹವೇ ಸ್ಮೃತಿ ಎಂದು ಯೋಗಶಾಸ್ತ್ರ ಹೇಳುತ್ತದೆ. ಈ ಸ್ಮೃತಿಗಳನ್ನವಲಂಬಿಸಿ ಮನುಷ್ಯನು ನಗುತ್ತ-ಅಳುತ್ತ ಜೀವನ-ಪಥದಲ್ಲಿ ಸಾಗುವನು. ಸಂಸ್ಕಾರದ ತಾರತಮ್ಯದಿಂದಾಗಿ ಸ್ಮೃತಿಯ ತಾರತಮ್ಯವೂ ಉಂಟಾಗುತ್ತದೆ. ಗಂಭೀರ ಸಂಸ್ಕಾರಗಳಿಂದ ಅಳಿಸಲಾಗದ ಸ್ಮೃತಿಗಳು ಹಾಗೂ ಲಘು ಸಂಸ್ಕಾರಗಳಿಂದ ಲಘು ಸ್ಮೃತಿಗಳು ಉಂಟಾಗುತ್ತವೆ. ಸ್ವಾಮಿ ಗಂಭೀರಾನಂದಜಿಯವರ ಈ ಸ್ಮಾರಕ ಗ್ರಂಥವು (ಸ್ವಾಮಿ ಗಂಭೀರಾನಂದ: ಏಕ್ ಮಹಾಜೀವನೇರ್ ಕಥಾ) ಅನೇಕ ಸಾಧು - ಭಕ್ತರುಗಳ ಅಮೂಲ್ಯ ಸ್ಮೃತಿಸಂಗ್ರಹವಾಗಿದೆ.



ಇತಿಹಾಸವು ಅವಿಚ್ಛಿನ್ನವಾಗಿ ಪ್ರವಹಿಸುತ್ತದೆ - ಎಂದೂ ನಿಲ್ಲದೆ ಹರಿಯುವ ಇತಿಹಾಸವು ಭೂತ, ವರ್ತಮಾನ ಹಾಗೂ ಭವಿಷ್ಯತ್ತಿನಲ್ಲೂ ವಿದ್ಯಮಾನವದು. ಅದೆಂದೂ ಸಮಾನವಾಗಿ ಹರಿಯದು, ಇದರ ಪ್ರವಾಹದಲ್ಲಿ ಏರಿಳಿತಗಳಿವೆ. ರೋಮ್ ಹಾಗೂ ಮೊಗಲ್ ಸಾಮ್ರಾಜ್ಯದ ಇತಿಹಾಸ, ಬೌದ್ಧ, ಹಾಗೂ ಕ್ರೈಸ್ತಧರ್ಮದ ಇತಿಹಾಸಗಳು ಇದಕ್ಕೆ ಸಾಕ್ಷಿ. ರಾಮಕೃಷ್ಣ ಮಹಾಸಂಘದ ಇತಿಹಾಸವು ಶ್ರೀರಾಮಕೃಷ್ಣ, ಶಾರದಾದೇವಿ ಹಾಗೂ ಶ್ರೀರಾಮಕೃಷ್ಣರ ಸಂನ್ಯಾಸಿ ಮತ್ತು ಗೃಹಸ್ಥ ಶಿಷ್ಯರುಗಳಿಗೆ ಮಾತ್ರವೇ ಸೀಮಿತವಾಗಿಲ್ಲ. ಸ್ವಾಮೀಜಿ ಹೇಳುವಂತೆ ಅದು '೧೫೦೦ ವರ್ಷ' ಪ್ರವಹಿಸುವುದು. ರಾಮಕೃಷ್ಣ ಹಾಗೂ ಅವರ ನೇರ ಶಿಷ್ಯರುಗಳ ಜೀವನ-ಕಾರ್ಯಗಳಿಂದ ಈ ಸಂಘದ ಇತಿಹಾಸವು ಕೊನೆಗೊಂಡಿತೆಂದು ತಿಳಿದರೆ ದೊಡ್ಡ ತಪ್ಪಾಗುವುದು. ರಾಮಕೃಷ್ಣರ ಕಡೆಯ ನೇರ ಶಿಷ್ಯರಾಗಿದ್ದ ಸ್ವಾಮಿ ವಿಜ್ಞಾನಾನಂದರ ಬಳಿಕ ಸ್ವಾಮಿ ಶುದ್ಧಾನಂದ, ವಿರಜಾನಂದ, ಶಂಕರಾನಂದ, ಮಾಧವಾನಂದ, ವೀರೇಶ್ವರಾನಂದ, ಗಂಭೀರಾನಂದ, ಭೂತೇಶಾನಂದ, ರಂಗನಾಥಾನಂದ, ಗಹನಾನಂದ, ಆತ್ಮಸ್ಥಾನಂದರು ಸಂಘಾಧ್ಯಕ್ಷರಾಗಿದ್ದರು. ಈ ಪ್ರೆಸಿ

ಡೆಂಟರ ಜೀವನ ಮತ್ತು ಕಾರ್ಯಕಲಾಪಗಳ ಇತಿಹಾಸವು ಅತಿ ಮುಖ್ಯವೂ ಪ್ರಯೋಜನಕರವೂ ಹೌದು. ಈ ಜ್ಞಾನ-ಗುಣ ಸಂಪನ್ನ ಸಂನ್ಯಾಸಿಗಳು ರಾಮಕೃಷ್ಣ ಸಂಘದ ಚರಿತ್ರೆ ಹಾಗೂ ಆಧ್ಯಾತ್ಮಿಕ ಧಾರೆಯನ್ನು ದೃಢಗೊಳಿಸಿರುತ್ತಾರೆ. ಇತಿಹಾಸದ ಪುಟಗಳಲ್ಲಿ ಇವರನ್ನು ಸೇರಿಸದಿದ್ದರೆ ಇದೊಂದು ದೊಡ್ಡ ನಷ್ಟವೇ ಸರಿ.

ಸ್ವಾಮಿ ಶುದ್ಧಾನಂದರ ಜೀವನ ಹಾಗೂ ಕಾರ್ಯಶೈಲಿ ಎಷ್ಟು ಮಂದಿಗೆ ತಾನೆ ತಿಳಿದಿದೆ? ಅವರು ಸ್ವಾಮೀಜಿಯವರ ಕೃತಿಗಳನ್ನು ಅನುವಾದಿಸಿ ಚಿರಸ್ಮರಣೀಯರಾದವರು. ಸ್ವಾಮಿ ವಿರಜಾನಂದರು ಸ್ವಾಮೀಜಿಯವರ ಪಾಶ್ಚಾತ್ಯ ಜೀವನಕ್ಕೆ ಸಂಬಂಧಿಸಿದ ಸಂಗತಿಗಳು ಹಾಗೂ ಅವರ ಕೃತಿಗಳನ್ನು ಸಂಗ್ರಹಿಸಿದ ಬಗೆ ಅತುಲನೀಯ. ಆ ನಂತರ ಸ್ವಾಮಿ ಶಂಕರಾನಂದ, ಸ್ವಾಮಿ ವಿಶುದ್ಧಾನಂದ, ಸ್ವಾಮಿ ಮಾಧವಾನಂದ, ಸ್ವಾಮಿ ವೀರೇಶ್ವರಾನಂದ, ಸ್ವಾಮಿ ಗಂಭೀರಾನಂದ, ಸ್ವಾಮಿ ಭೂತೇಶಾನಂದ ಮೊದಲಾದ ಖ್ಯಾತ ಸಂನ್ಯಾಸಿಗಳು ರಾಮಕೃಷ್ಣ ಸಂಘಕ್ಕೆ ನೀಡಿದ ಕೊಡುಗೆಯ ವಿವರವಾದ ರೆಕಾರ್ಡ್ ಲಿಪಿಬದ್ಧವಾಗಿರುವುದು ನನಗೆ ತಿಳಿಯದು. ಈ ಮಹಾನ್ ಸಂನ್ಯಾಸಿಗಳು ದಧೀಚಿಯಂತೆ ತಮ್ಮ ಜೀವನದ ಕಣಕಣವನ್ನೂ ತ್ಯಾಗ ಮಾಡಿ ರಾಮಕೃಷ್ಣ ಸಂಘಕ್ಕೆ ಪುಷ್ಟಿ, ದೃಢತೆ ಹಾಗೂ ಸೌಂದರ್ಯವನ್ನು ನೀಡಿದ್ದಾರೆ. ಸ್ವಾಮಿ ವಿರಜಾನಂದರ ಡೈರಿಯನ್ನವಲಂಬಿಸಿ ಸ್ವಾಮಿ ಶ್ರದ್ಧಾನಂದರು 'ಅತೀತೇರ್ ಸ್ಮೃತಿ'('ಕಳೆದ ದಿನಗಳ ನೆನಪುಗಳು') ಯನ್ನು ಬರೆದಿರುವರು. ಇದೊಂದು ಐತಿಹಾಸಿಕ ದಾಖಲೆ. ಅನಂತರ ಭಕ್ತರು ಸಂಗ್ರಹಿಸಿ ಪ್ರಕಟಿಸಿರುವ ಸ್ವಾಮಿ ಮಾಧವಾನಂದ ಹಾಗೂ ಸ್ವಾಮಿ ಭೂತೇಶಾನಂದರ ಸ್ಮಾರಕ ಗ್ರಂಥಗಳಿವೆ. ಸ್ವಾಮಿ ಗಂಭೀರಾನಂದರ ಈ ಸ್ಮಾರಕ ಗ್ರಂಥವನ್ನು ನಾವು ಮನಸಾರೆ ಅಭಿನಂದಿಸೋಣ. ಇದರಲ್ಲಿ ಅವರ ವ್ಯಕ್ತಿತ್ವ ಹಾಗೂ ಚಾರಿತ್ರ್ಯದ ಕಿಂಚಿತ್ ಆಸ್ವಾದನೆ ಮಾಡಬಹುದು. ಅವರ ದೇಹತ್ಯಾಗದ ಕೂಡಲೇ ಈ ಗ್ರಂಥರಚನೆಯು ಪ್ರಾರಂಭವಾಗಿದ್ದರೆ ಅವರ ಅನೇಕ ಸಮಕಾಲೀನ ಸಾಧು-ಭಕ್ತರುಗಳ ಅಮೂಲ್ಯ ಸ್ಮೃತಿಗಳೂ ನಮಗೆ ದೊರೆಯುತ್ತಿದ್ದವು.

ಇತಿಹಾಸವು ಸ್ಮರಿಸುವ ವ್ಯಕ್ತಿಗಳಾದರೂ ಎಂಥವರು? ಅದರ ಪುಟಗಳಲ್ಲಿ ಸ್ಥಾನವನ್ನು ಪಡೆಯುವವರಾರು? ಇತಿಹಾಸದ ಸುವರ್ಣ ಪುಟಗಳಲ್ಲಿ ಸ್ಥಳವು ಅಲ್ಪವೂ ಸಂಕೀರ್ಣವೂ ಆಗಿದ್ದು, ಬಹಳ ಸೂಕ್ಷ್ಮವಾಗಿ ವಿಚಾರಮಾಡಿ ಯಾತ್ರಿಗಳನ್ನು ಆರಿಸಬೇಕಾಗುತ್ತದೆ. ಅದರ ಪುಟಗಳಲ್ಲಿ ಸಾಮಾನ್ಯ ಜನರಿಗೂ, ಧನವಂತರಿಗೂ, ವಿಲಾಸಿಗಳಿಗೂ ಸ್ಥಾನವಿಲ್ಲ. ಮಾನವ ಕಲ್ಯಾಣಕ್ಕಾಗಿ ನಿಃಸ್ವಾರ್ಥ ಭಾವದಿಂದ ದಾನಗೈದವರು ಹಾಗೂ ಜಗತ್ತಿಗೆ ನೂತನ ಕೊಡುಗೆಯನ್ನು ನೀಡಿದವರು ಮಾತ್ರವೇ ಅದರಲ್ಲಿ ಸ್ಥಾನವನ್ನು ಪಡೆಯವವರು. ತಮ್ಮ ಕರ್ಮ ಹಾಗೂ ತ್ಯಾಗಗಳಿಂದ ಜಗತ್ತಿನ ಹೃದಯದಲ್ಲಿ ಮನೆಮಾಡಿದ ಮಹಾತ್ಮರನ್ನು ಮಾತ್ರ ಇತಿಹಾಸವು ಸ್ಮರಿಸುವುದು. ಸ್ವಾಮಿ ಗಂಭೀರಾನಂದರು ರಾಮಕೃಷ್ಣ ಮಹಾಸಂಘದಲ್ಲಿ ಅಂತಹ ಸ್ಮರಣೀಯ-ಪೂಜನೀಯ ವ್ಯಕ್ತಿಯೆಂಬುದರಲ್ಲಿ ಸಂದೇಹವಿಲ್ಲ.

'ಕೀರ್ತಿರ್ಯಸ್ಯ ಸ ಜೀವತಿ' ಎಂಬ ಮಾತಿದೆ. ಅರ್ಥಾತ್ ಕೀರ್ತಿವಂತನೇ ನಿಜವಾಗಿಯೂ ಜೀವಿಸುವನು; ಯಶಸ್ಸಿಲ್ಲದವನು ಜೀವಂತವಾಗಿದ್ದರೂ ಮೃತನಂತೆ. ಸ್ವಾಮಿ ಗಂಭೀರಾನಂದಜಿಯವರು ತಮ್ಮ ಕಾರ್ಯ ಹಾಗೂ ಅಪೂರ್ವ ಗ್ರಂಥಮಾಲೆಯ ಮೂಲಕ ಎಂದೆಂದೂ ಜೀವಿಸಿರುವರು. ಆಂಗ್ಲ, ಬಂಗಾಳಿ ಹಾಗೂ ಸಂಸ್ಕೃತ — ಈ ಮೂರು ಭಾಷೆಗಳಲ್ಲಿ ಅವರು ರಚಿಸಿ, ಸಂಗ್ರಹಿಸಿ ಅನುವಾದಿಸಿರುವ ಗ್ರಂಥಮಾಲೆಯು ರಾಮಕೃಷ್ಣ ಸಂಘ ಹಾಗೂ ಆಧ್ಯಾತ್ಮಿಕ ಜಗತ್ತಿನ ಚಿರ ಸಂಪತ್ತೆನಿಸಿದೆ. ಈಗಲೂ ಬಹುತೇಕ ಸಾಧುಗಳೂ ಭಕ್ತರೂ ಅವರ ಅಪೂರ್ವ ಜೀವನಚರಿತ್ರೆಯನ್ನು ಚರ್ಚಿಸುತ್ತಾರೆ. ಸಾಧುಸಮಾಜದಲ್ಲಿ ಒಂದು ನಾಣ್ನುಡಿ ಹೀಗಿದೆ: ಯಾವ ಸಾಧುವಿನೆದುರು ಸಾಧುಗಳೂ ನತಮಸ್ತಕರಾಗುವರೊ ಆ ಸಾಧುವಿನಲ್ಲಿ ಸಾರವಸ್ತುವು ಖಂಡಿತವಾಗಿಯೂ ಇರುವುದು.

ವೀರರ ಆರಾಧನೆ ಹಾಗೂ ಚರಿತ್ರ ಪೂಜೆ ಪ್ರಪಂಚದ ಎಲ್ಲ ದೇಶ-ಜಾತಿಗಳಲ್ಲೂ ಉಂಟು. ನಮ್ಮ ದೇಶದಲ್ಲಿ ರಾಮ, ಕೃಷ್ಣ, ಬುದ್ಧ, ಚೈತನ್ಯ, ರಾಮಕೃಷ್ಣರಿಂದ ಮೊದಲುಗೊಂಡು ಅನೇಕ ಸಾಧು-ಸಂತರೂ, ಸಮಾಜ ಸುಧಾರಕರೂ, ಲೇಖಕರೂ, ಕವಿಗಳೂ, ರಾಷ್ಟ್ರನಾಯಕರೂ ಕೂಡ ಪೂಜನೀಯರೂ ಶ್ರದ್ಧೇಯರೂ ಆಗಿದ್ದಾರೆ. ಇದು ಸ್ವಾಭಾವಿಕವೆ. ಮನುಷ್ಯನು ಮಹಾತ್ಮರ ಎದುರು ಗೌರವವನ್ನು ಸೂಚಿಸದಿರುವುದು ಅಸಾಧ್ಯ. ಇವರೇ ಸಮಾಜದ ಆದರ್ಶಪುರುಷರು. 'ಮಹಾಭಾರತ'ದಲ್ಲಿ ಯಕ್ಷನು ಪ್ರಶ್ನಿಸುತ್ತಾನೆ. ''ಕಃ ಪಂಥಾಃ?''-ಯಾವ ಪಥವನ್ನು ಅನುಸರಿಸತಕ್ಕದ್ದು? ಯುಧಿಷ್ಠಿರನು ಉತ್ತರಿಸುತ್ತಾನೆ: ''ವೇದಗಳು ಬೇರೆ ಬೇರೆ (ವಿಭಿನ್ನ); ಸ್ಮೃತಿಗಳೂ ಗೂಢವಾಗಿರುವವು. ಆದ್ದರಿಂದ ಮಹಾತ್ಮರು ಅಥವ ಕೀರ್ತಿವಂತ ಸಾಧುಜನರು ನಡೆದ ದಾರಿಯೇ ನಿಜವಾದ ಪಥ.'' ಸ್ವಾಮಿ ಗಂಭೀರಾನಂದರು ಅಂತಹ ಪಥವನ್ನನುಸರಿಸಿ ಸಾಧುಜೀವನವನ್ನು ನಡೆಸಲು ಮಾರ್ಗದರ್ಶನವನ್ನು ನೀಡಿದ ಮಹಾನ್ ಸಂನ್ಯಾಸಿಗಳು. ಇದೇ ಗುರುವಿನ ಲಕ್ಷಣ.

ಈ ಪ್ರಪಂಚದಲ್ಲಿ ಎಲ್ಲಕ್ಕಿಂತಲೂ ಹೆಚ್ಚಾಗಿ ಅಗತ್ಯವಿರುವುದಾದರೂ ಏನು? ೧೮೯೭ರ ಜೂನ್ ಒಂದನೆ ತಾರೀಖಿನಂದು ಸ್ವಾಮೀಜಿಯವರು ಸೋದರಿ ನಿವೇದಿತಾಗೆ ಹೀಗೆ ಬರೆಯುತ್ತಾರೆ : ''ಪ್ರಪಂಚದ ಧರ್ಮಗಳು ಈಗ ಪ್ರಾಣಹೀನ ಅಣಕಗಳಾಗಿ ಮಾರ್ಪಟ್ಟಿವೆ. ಇಂದು ಜಗತ್ತಿಗೆ ಬೇಕಾಗಿರುವುದೆಂದರೆ ಚರಿತ್ರ ಮಾತ್ರವೆ. ಜಗತ್ತಿಗೆ ಇಂದು ಪ್ರೇಮದೀಪ್ತ ಹಾಗೂ ಸ್ವಾರ್ಥಶೂನ್ಯರು ಬೇಕಾಗಿದ್ದಾರೆ'' ಎಂದು. ಇಂತಹ ಆದರ್ಶವನ್ನು ಸ್ವಾಮಿ ವಿವೇಕಾನಂದರ ಅನುಗಾಮಿಗಳಾದ ಸ್ವಾಮಿ

ಗಂಭೀರಾನಂದರು ನಮ್ಮೆದುರು ಇರಿಸಿದ್ದಾರೆ. ಬೇಲೂರು ಮಠದ ಮಠ-ಮಿಷನ್ನಿನ ಆಫೀಸಿನಲ್ಲಿ ಕಾರ್ಯದಲ್ಲಿ ತೊಡಗಿದ್ದ ಸಾಧುಗಳೊಬ್ಬರು ಗಂಭೀರ ಮಹಾರಾಜರ ಬಗ್ಗೆ ನನಗೆ ಹೀಗೆ ಹೇಳಿದ್ದರು.-''ಇವರಿಗೆ ವೈಯಕ್ತಿಕ ಸಮಸ್ಯೆ ಎಂಬುದೇನೂ ಇರಲಿಲ್ಲ. ಹಗಲು-ಇರುಳೆನ್ನದೆ ರಾಮಕೃಷ್ಣರೂಪಿ ಸಂಘದ ಸೇವೆಗೈಯುತ್ತಿದ್ದ ಇವರೊಂದಿಗೆ ಕೆಲಸ ಮಾಡುತ್ತ ಆನಂದದಿಂದಿದ್ದೇನೆ.'' ಆಗ ಮಹಾರಾಜರು ಮಠ-ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾಗಿದ್ದರು.

ಧರ್ಮಸಂಪ್ರದಾಯಗಳು ಮೂರು ರೀತಿಯಲ್ಲಿ ಪ್ರಾರಂಭಗೊಳ್ಳುವುದನ್ನು ನಾವು ಇತಿಹಾಸದಲ್ಲಿ ಕಾಣುತ್ತೇವೆ : ೧) ಯಾವುದೇ ಧರ್ಮನಾಯಕರ ಆಧ್ಯಾತ್ಮಿಕ ಶಕ್ತಿಯಿಂದ ಸ್ಥಾಪಿತವಾದ ಧರ್ಮ ೨) ನೈತಿಕತೆ ಹಾಗೂ ಚಾರಿತ್ರ್ಯದ ಬಲದಿಂದ ಸ್ಥಾಪಿಸಲ್ಪಟ್ಟ ಧರ್ಮ ೩) ರಾಜನೀತಿ ಹಾಗೂ ಬುದ್ಧಿವಂತಿಕೆಯ ನೇತೃತ್ವದಲ್ಲಿ 'ಸ್ಥಾಪಿತಗೊಂಡ ಧರ್ಮ. 'Absolute power corrupts absolutely' ಎಂಬುದೊಂದು ಮಾತಿದೆ. ಈ ಮೂರನೆ ಶ್ರೇಣಿಗೆ ಸ್ವಾಮಿ ಗಂಭೀರಾನಂದರು ಸೇರುವುದಿಲ್ಲವೆಂದು ನಾವು ಖಂಡಿತವಾಗಿಯೂ ಹೇಳಬಹುದು. ಅವರೆಂದೂ ಸ್ಥಾನ,ಅಧಿಕಾರಗಳಿಗೆ ಆಸೆಪಟ್ಟವರಲ್ಲ. ಅವರೇ ಹೇಳುತ್ತಿದ್ದುದುಂಟು, ಅವರು ಸಾಧುವಾಗಲು ಬಂದಾಗ ಅವರನ್ನು ತಿರಸ್ಕರಿಸಲಾಯಿತು. ನಂತರ ದೇವಘರ್ ಕೇಂದ್ರದಲ್ಲಿ ಶಾಲಾ ಶಿಕ್ಷಕರಾಗಿ, ಬಳಿಕ ಮುಖ್ಯೋಪಾಧ್ಯಾಯರಾಗಿ ಮತ್ತು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ೧೯೪೩ರಿಂದ ೧೯೪೪ರ ವರೆಗೆ ಮಠ ಮಿಷನ್ನಿನ ಟ್ರಸ್ಟಿ ಹಾಗೂ ಸಹ-ಕಾರ್ಯದರ್ಶಿಯಾಗಿ ಬೇಲೂರು ಮಠದಲ್ಲಿ ಕಾರ್ಯನಿರತರಾಗಿದ್ದರು. ಆ ಬಳಿಕ ೧೯೫೩ರಿಂದ ೧೯೬೩ರ ವರೆಗೆ ಅದ್ವೈತ ಆಶ್ರಮದ ಪ್ರೆಸಿಡೆಂಟ್ ಆದರು. ಅವರು ಯೋಗ್ಯ ವ್ಯಕ್ತಿಗಳಾಗಿದ್ದರು. ಈ ಬಗ್ಗೆ ಖಲೀಫಾ ಅಲಿಯವರ ಉಕ್ತಿಯೊಂದು ಉಲ್ಲೇಖಯೋಗ್ಯ — ಅವರು ಉತ್ತರಾಧಿಕಾರಿಯಾಗಿ ಖಲೀಫಾ ಪದವಿಯನ್ನು ನಾಲ್ಕು ಬಾರಿ ಕಳೆದುಕೊಂಡು, ನಾಲ್ಕು ಬಾರಿ ಆಯ್ಕೆಯಾದರು. ''ಜೀವನದಲ್ಲಿ ನಿನಗೆ ಬೇಕಾದ ಸ್ಥಾನ ನಿನ್ನನ್ನು ಹುಡುಕಿಕೊಂಡು ಹೋಗುತ್ತದೆ. ಆದ್ದರಿಂದ ನೀನು ಅದನ್ನು ಹುಡುಕುತ್ತ ಹೋಗದೆ ನಿಶ್ಚಿಂತೆಯಿಂದಿರು.''

ವಿರಾಗಿ, ಪ್ರೇಮಮಯ, ಪವಿತ್ರ, ಶಾಸ್ತ್ರಜ್ಞ ಹಾಗೂ ನಿಃಸ್ವಾರ್ಥ ಸಂನ್ಯಾಸಿಗಳು ಸದಾ ಗೌರವಪಾತ್ರರೆಂಬುದನ್ನು ಸಾಧುಸಮಾಜದಲ್ಲಿ ಕಾಣಬಹುದು. ಈ ಅಪೂರ್ವ ಸದ್ಗುಣಗಳನ್ನು ಅವರು ತಮ್ಮ ಜೀವನದಲ್ಲಿ ಆರ್ಜನೆ ಮಾಡಿದ್ದು, ಸಾಧುಗಳು ಒಮ್ಮತದಿಂದ ಅವರನ್ನು ಸ್ವೀಕರಿಸಿದ್ದರು. ಅವರು ಗೀತೆಯ ಈ ಶ್ಲೋಕವನ್ನು ತಮ್ಮ ಸ್ವಂತ ಜೀವನದಲ್ಲಿ ಪಾಲಿಸಲು ಪ್ರಯತ್ನಿಸಿದ್ದರೆಂದು ಸ್ವತಃ ಹೇಳುತ್ತಿದ್ದರು: **'ಜ್ಞೇಯಃ ಸ ನಿತ್ಯ ಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ । ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬಂಧಾತ್ ಪ್ರಮುಚ್ಯತೇ ॥'** *(ಗೀತೆ, ೫.೩).*'ಹೇ ಮಹಾಬಾಹೋ, ಯಾವನು ದ್ವೇಷ ಹಾಗೂ ವಾಸನಾರಹಿತನೂ, ರಾಗ, ಸುಖ-ದುಃಖ, ಮಾನ-ಅಪಮಾನ ಇತ್ಯಾದಿ ದ್ವಂದ್ವರಹಿತನೂ, ತ್ಯಾಗವ್ರತದಲ್ಲಿ ಪ್ರತಿಷ್ಠಿತನೂ ಆಗಿರುವನೋ ಅಂತಹ ವ್ಯಕ್ತಿಯು ಬಂಧನಗಳಿಂದ ಅನಾ ಯಾಸವಾಗಿ ಮುಕ್ತನಾಗುವನು.'' ದೀರ್ಘಕಾಲ ಅವರೊಂದಿ ಗಿದ್ದು, ಅವರು ಕಾಮಕಾಂಚನವನ್ನು ತ್ಯಜಿಸಿದ್ದ ನಿಷ್ಕಳಂಕ ಸಂನ್ಯಾಸಿಗಳೆಂಬುದನ್ನು ನಾನು ಬಲ್ಲೆ. ಅವರ ಕರ್ಮಶಕ್ತಿ ಹಾಗೂ ಮೇಧಾಶಕ್ತಿ - ಎರಡೂ ಪ್ರಬಲವಾಗಿದ್ದವು. ಅವರ ಸತ್ಯನಿಷ್ಠೆ, ವೇದೋಜ್ಜ್ವಲ ಬುದ್ಧಿಶಕ್ತಿ, ಶುದ್ಧ ಚರಿತ್ರೆ ಹಾಗೂ ರಾಮಕೃಷ್ಣ-ವಿವೇಕಾನಂದರಲ್ಲಿ ಅವರಿಗಿದ್ದ ಭಕ್ತಿ — ಇವುಗಳು ಅವರ ವ್ಯಕ್ತಿತ್ವವನ್ನು ಪ್ರಕಾಶಮಾನಗೊಳಿಸಿದ್ದವು. ಸೂಕ್ಷ್ಮದರ್ಶಕ ಯಂತ್ರವು ಅತಿಚಿಕ್ಕ ವಸ್ತುವನ್ನು ದೊಡ್ಡದಾಗಿ ತೋರುವುದು. ದೂರದರ್ಶಕ ಯಂತ್ರವು ದೂರದ ವಸ್ತುವನ್ನು ಹತ್ತಿರವಾಗಿ ತೋರುವುದು. ಆದರೆ ದೊಡ್ಡ ವಸ್ತುವನ್ನು ಚಿಕ್ಕದಾಗಿ ತೋರುವ ಯಂತ್ರದ ಉಲ್ಲೇಖವು ಭೌತಶಾಸ್ತ್ರದಲ್ಲಿ ಇದ್ದರೂ ಅದು ಯಾವಾಗಲೂ ಬಳಕೆಯಲ್ಲಿರದು. ಸ್ವಾಮಿ ಗಂಭೀರಾನಂದರು ಅತಿ ವಿಶಾಲ ವ್ಯಕ್ತಿತ್ವವನ್ನು ಕ್ಷುದ್ರ ಬುದ್ಧಿಯಿಂದ ಅಳೆಯುವ ಪ್ರಯತ್ನ ಮಾಡುತ್ತಿರುವ ನಾನು ತೃತೀಯ ಶ್ರೇಣಿಗೆ ಸೇರಿದ ಯಂತ್ರದಂತಿರುವೆ. ಅವರು ಕಾರ್ಯಕ್ಷೇತ್ರದಲ್ಲಿ ಕಠೋರರಾಗಿದ್ದರೂ ವ್ಯವಹಾರದಲ್ಲಿ ಕೋಮಲ ಹೃದಯಿಗಳಾಗಿದ್ದು ಅವರ ಈ ಎರಡು ರೂಪಗಳನ್ನೂ ನೋಡುವ ಸೌಭಾಗ್ಯ ನನ್ನದಾಗಿದೆ.

'ಸಮಾಪ್ತಿ'ಯ ಬಳಿಕ 'ಪಶ್ಚಲೇಖ'ವನ್ನು ಬರೆಯುತ್ತಿರುವೆ. ಈ ಸ್ಮಾರಕಗ್ರಂಥದಲ್ಲಿ (ಸ್ವಾಮಿ ಗಂಭೀರಾನಂದ: ಏಕ್ ಮಹಾಜೀವನೇರ್ ಕಥಾ) ಸ್ವಾಮಿ ಗಂಭೀರಾನಂದರ ಸಂಕ್ಷಿಪ್ತ ಸ್ಮೃತಿಕಥೆಯನ್ನು ಬರೆದಿರುವೆ. ಈ ಪೀಠಿಕೆಯನ್ನು ಬರೆಯುತ್ತಿದ್ದಂತೆ ಮೂರು ವಿದಾಯ ಚಿತ್ರಗಳು ಕಣ್ಣೆದುರು ತೇಲಿ ಬರುತ್ತಿವೆ.

ಬೇಲೂರು ಮಠದಿಂದ ಹಾಲಿವುಡ್‌ಗೆ ಹೊರಟಿದ್ದೆ. ಠಾಕೂರರ ಮಂದಿರದ ಹಿಂದಿನ ಕಟ್ಟಡದ ವರಾಂಡದಲ್ಲಿ ನಿಂತು ಕಾರಿಗಾಗಿ ಕಾಯುತ್ತಿದ್ದಾಗ ಪೂಜನೀಯ ಮಹಾರಾಜರು ಹಳೆಯ ಮಿಷನ್ ಆಫೀಸಿನ ಮೇಲಂತಸ್ತಿನಿಂದ ನನ್ನನ್ನು ಬೀಳ್ಕೊಡಲೆಂದು ನಡೆದು ಬರುತ್ತಿದ್ದಾರೆ. ನಾನೆಂದೆ, ''ಇಷ್ಟೊಂದು ಕಷ್ಟಪಟ್ಟು ಏಕೆ ಬಂದಿರಿ? ನಿನ್ನೆಯೇ ನಾನು ನಿಮ್ಮಿಂದ ಬೀಳ್ಕೊಂಡಿದ್ದೆನಲ್ಲ!'' ಅವರೆಂದರು ''ನೀನು ಅಷ್ಟು ದೂರ ಹೊರಟು ಹೋಗುತ್ತೀ. ಹಾಗೆಂದೇ ನಿನ್ನನ್ನು ಮತ್ತೊಮ್ಮೆ ನೋಡಲು ಬಂದೆ.'' ಆಗ ಅವರು ಜನರಲ್ ಸೆಕ್ರೆಟರಿಯೂ, ಹಿರಿಯ ಸಾಧುಗಳೂ ಆಗಿದ್ದು, ನಾನೊಬ್ಬ ಚಿಕ್ಕ ನಗಣ್ಯ ಸಾಧು. ಅವರ ನಿರಭಿಮಾನತೆ ಹಾಗೂ ಅವರಿಗೆ ನನ್ನ ಮೇಲಿದ್ದ ಪ್ರೀತಿಯನ್ನು ಕಂಡು ಮುಗ್ಧನಾದೆ.

ಹೌರಾ ಸ್ಟೇಷನ್, ಮಂಗಳವಾರ, ೨೩ ಅಕ್ಟೋಬರ್ ೧೯೮೨, ಸಂಜೆ ೬.೧೫: ಪೂಜನೀಯ ಮಹಾರಾಜರು ಆಗ ಮಠ–ಮಿಷನ್ನಿನ ವೈಸ್ ಪ್ರೆಸಿಡೆಂಟ್ ಆಗಿದ್ದರು. ದೀಕ್ಷೆ ನೀಡಲು ಅವರು ಎಲ್ಲಿಗೋ ಹೊರಟಿದ್ದರು. ಬೇಲೂರು ಮಠದಿಂದ ಸ್ವಾಮಿ ವಂದನಾನಂದಜಿ, ಸ್ವಾಮಿ ಆತ್ಮಸ್ಥಾನಂದಜಿ ಹಾಗೂ ಸ್ವಾಮಿ ಗೀತಾನಂದಜಿ ಗಂಭೀರ ಮಹಾರಾಜರನ್ನು ಹೌರಾ ಸ್ಟೇಶನ್ನಿಗೆ ಬೀಳ್ಕೊಡಲು ಹೋದರು. ಮತ್ತೊಮ್ಮೆ ಅವರೊಂದಿಗೆ ಭೇಟಿಯಾಗಲಾರೆನೆಂದು ನಾನು ಸಹ ಅವರನ್ನು ನೋಡಲೆಂದು ಅದ್ವೈತ ಆಶ್ರಮದಿಂದ ಹೋಗಿದ್ದೆ. ಆತ್ಮಸ್ಥಾನಂದರು ಗಂಭೀರ ಮಹಾರಾಜರನ್ನು ''ನಮಗೆ ಐಸ್‌ಕ್ರೀಂ ಕೊಡಿಸಿ'' ಎಂದರು. ನಾನೆಂದೆ ''ನಾನು ಹಣ ಕೊಡುತ್ತೇನೆ''. ಆಗ ಆತ್ಮಸ್ಥಾನಂದಜಿ ''ಇಲ್ಲ, ಗಂಭೀರ ಮಹಾರಾಜರು ಕೊಡುತ್ತಾರೆ'' ಎಂದಾಗ ಗಂಭೀರ ಮಹಾರಾಜರು ನಕ್ಕು, 'ನನ್ನ ಹಣ ಚೇತನಾನಂದರ ಜೇಬಿನಲ್ಲಿದೆ'' ಎನ್ನುತ್ತ ನನಗೆ ಸಾಧು ಸೇವೆಯ ಸದವಕಾಶವನ್ನು ನೀಡಿದರು. ೭.೩೦ಕ್ಕೆ ರೈಲು ಹೊರಟಿತು. ಒಂದು ಗಂಟೆಯ ಕಾಲ ಅವರೊಡನೆ ನಾನಾ ವಿಷಯಗಳನ್ನು ಮಾತನಾಡಿದ್ದೆವು. ಟ್ರೈನ್ ಹೊರಡುವ ಮುಂಚೆ ನಾನು ಮಹಾರಾಜರ ಕೈಗಳನ್ನು ಹಿಡಿದು ನನ್ನ ಮಸ್ತಕದ ಮೇಲಿರಿಸಿಕೊಳ್ಳುತ್ತ ''ನನ್ನನ್ನು ಆಶೀರ್ವದಿಸಿರಿ'' ಎನ್ನುತ್ತಿದ್ದಂತೆ ಆ ಕ್ಷಣದಲ್ಲಿ ಅವರ ಸ್ನೇಹಮಯ ದೃಷ್ಟಿಯು ನನ್ನ ಮೇಲಿದ್ದುದನ್ನು ಪ್ರತ್ಯಕ್ಷವಾಗಿ ಕಂಡೆ.

ಜಯರಾಮಬಾಟಿ, ಶನಿವಾರ, ೨೫ ಅಕ್ಷೋಬರ್ ೧೯೮೬, ಮಧ್ಯಾಹ್ನ ೧೨.೩೦: ಒಂದು ದಿನ ಗಂಭೀರ ಮಹಾರಾಜರು 'ಉದ್ಬೋಧನ'ದಲ್ಲಿ ಒಂದು ನೂರು ಜನರಿಗೆ ದೀಕ್ಷೆಯನ್ನು ನೀಡಿದರು. ಮಧ್ಯಾಹ್ನದ ಭೋಜನಾನಂತರ ಅವರು ವಿಶ್ರಮಿಸುವ ಮುನ್ನ ನಾನು ಅವರ ಕೋಣೆಗೆ ಹೋದೆ, ಅವರಿಗೆ ತಿಳಿಸದೆ ಒಂದು ಫೋಟೊ ತೆಗೆದೆ. ಕ್ಯಾಮೆರದ ಬೆಳಕು ಬಿದ್ದಾಗ ಮಹಾರಾಜರು ತಮ್ಮ ಸೇವಕನಾದ ಜಗದೀಶನನ್ನು ಕರೆದು, ''ಏನಪ್ಪ, ನನ್ನ ಕಣ್ಣಿಗೆ ಬೆಳಕು ಬಿಟ್ಟವರು ಯಾರು?'' ಎಂದರು. ''ಮಹಾರಾಜ್ ನಾನು ನಿಮ್ಮದೊಂದು ಫೋಟೋ ತೆಗೆದುಕೊಂಡೆ. ನೀವೀಗ ವಿಶ್ರಮಿಸುವಿರಿ ಹಾಗೂ ನಾಳೆ ರಾಮ್‌ಹರಿಪುರಕ್ಕೆ ಹೊರಟುಹೋಗುವಿರಿ. ನಾನು ಇಂದೇ ಪ್ರಸಾದವನ್ನು ತೆಗೆದುಕೊಂಡು ಕಲ್ಕತ್ತಕ್ಕೆ ವಾಪಸ್ಸಾಗುತ್ತೇನೆ. ಈ ಯಾತ್ರೆಯ ಬಳಿಕ ನಿಮ್ಮೊಡನೆ ನನ್ನ ಭೇಟಿಯಾಗುವುದಿಲ್ಲ. ನೀವು ನನಗೆ ಆಶೀರ್ವಾದ ಮಾಡಿ'' ಎಂದೆ. ಅವರು ಮನಸಾರೆ ಆಶೀರ್ವದಿಸಿದರು. ಅದೇ ಅವರ ಕಡೆಯ ದರ್ಶನ.

ಸ್ವಾಮಿ ಗಂಭೀರಾನಂದಜಿಯವರ ದಿವ್ಯ ಜೀವನವು ಸಾಧು–ಭಕ್ತರಿಗೆ ಭಗವಂತನೆಡೆಗೆ ಮುನ್ನಡೆಯಲು ಸ್ಫೂರ್ತಿಯನ್ನು ನೀಡಲೆಂದು ನನ್ನ ಪ್ರಾರ್ಥನೆ. *(ಸಮಾಪ್ತಿ)*

## ಶ್ರೀಮಾತೆಯವರ ಉಪದೇಶಗಳು



* ನಾನು ದಯೆ ತೋರಿ ಮಂತ್ರದೀಕ್ಷೆ ನೀಡುತ್ತೇನೆ. ಅವರು ಬಿಡಲಾರರು, ಒಂದೇ ಸಮನೆ ಅಳುತ್ತಾರೆ. ಅದನ್ನು ನೋಡಿ ನನಗೆ ದಯೆ ಉಕ್ಕುತ್ತದೆ. ಕೃಪೆ ತೋರಿಸಿ ನಾನು ಮಂತ್ರದೀಕ್ಷೆ ನೀಡುತ್ತೇನೆ. ಇಲ್ಲದಿದ್ದರೆ ಅದರಿಂದ ನನಗೇನಂತೆ ಲಾಭ? ಮಂತ್ರದೀಕ್ಷೆ ನೀಡಿದರೆ ಅವರ ಪಾಪವನ್ನು ಸ್ವೀಕರಿಸಬೇಕಾಗುತ್ತದೆ. ನಾನು ಅಂದುಕೊಳ್ಳುತ್ತೇನೆ, ಈ ಶರೀರವಂತೂ ಒಂದು ದಿನ ಹೊರಟು ಹೋಗಲೇಬೇಕು. ಆದರೆ ಅದರಿಂದ ಇವರಿಗೆ ಒಳ್ಳೆಯದಾಗುವುದಾದರೆ ಆಗಿಬಿಡಲಿ ಅಂತ.

* ಈಗಿನ ಮಂದಿ ತುಂಬಾ ಬುದ್ಧಿವಂತರು. ದೇವರ ಭಾವಚಿತ್ರವನ್ನು ತೆಗೆದುಬಿಟ್ಟಿದ್ದಾರೆ. ಮಾಸ್ಟರ್ ಮಹಾಶಯನನ್ನೇ ನೋಡು. ಅವನೇನು ಸಾಮಾನ್ಯ ವ್ಯಕ್ತಿಯೆ? ಎಷ್ಟೊಂದು ಮಾತುಕತೆಗಳನ್ನು ದಾಖಲಿಸಿ ಇಟ್ಟುಬಿಟ್ಟಿದ್ದಾನೆ ! ಯಾವ ಅವತಾರದ ಭಾವಚಿತ್ರ ಈ ರೀತಿ ತೆಗೆಯಲಾಗಿದೆ, ಅಥವಾ ಅವರ ಮಾತುಕತೆಗಳನ್ನು ಬರೆದಿಡಲಾಗಿದೆ ಹೇಳು ?

* ಎಲ್ಲಿಯ ತನಕ 'ನಾನು' ಎನ್ನುವುದು ಇರುವುದೋ ಅಲ್ಲಿಯ ತನಕವೂ ಆಸೆಗಳು ಇದ್ದೇ ಇರುತ್ತವೆ. ಇಂಥ ಆಸೆಗಳಿಂದ ನಿನಗೇನೂ ತೊಂದರೆಯುಂಟಾಗದು. ಶ್ರೀರಾಮಕೃಷ್ಣರೇ ನಿನ್ನನ್ನು ರಕ್ಷಿಸುತ್ತಾರೆ. ಯಾರು ಅವರಲ್ಲಿ ಶರಣಾಗತರಾಗಿದ್ದಾರೋ, ಯಾರು ಎಲ್ಲವನ್ನೂ ತ್ಯಜಿಸಿ ಅವರ ಆಶ್ರಯವನ್ನು ಹೊಂದಿದ್ದಾರೋ ಅಥವಾ ಯಾರು ಒಳ್ಳೆಯವರಾಗಬಯಸುತ್ತಾರೋ ಅವರನ್ನು ಶ್ರೀರಾಮಕೃಷ್ಣರು ಕಾಪಾಡದಿದ್ದರೆ ಅವರು ಮಹಾಪಾಪಕ್ಕೆ ಗುರಿಯಾಗುತ್ತಾರೆ. ಅವರ ಮೇಲೆ ಎಲ್ಲ ಭಾರವನ್ನು ಹಾಕಿ ಬದುಕಬೇಕು. ಅವರು ಒಳ್ಳೆಯದನ್ನು ಮಾಡುವುದಿದ್ದರೆ ಮಾಡುವರು, ಮುಳುಗಿಸಬೇಕೆಂದಿದ್ದರೆ ಮುಳುಗಿಸಲಿ. ಆದರೂ ನೀನು ಒಳ್ಳೆಯ ಕೆಲಸಗಳನ್ನೇ ಮಾಡುತ್ತ ಹೋಗು ; ಅದೂ ಅವರು ಕೊಟ್ಟ ಶಕ್ತಿಗೆ ಅನುಗುಣವಾಗಿ.

* ಶ್ರೀರಾಮಕೃಷ್ಣರಲ್ಲಿ ಶರಣಾಗತರಾದರೆ ಎಲ್ಲವೂ ಸಿಗಬಹುದು. ತ್ಯಾಗವೇ ಅವರ ಆಭರಣ. ಅವರು ತ್ಯಾಗ ಮಾಡಿದ್ದರಿಂದಲೇ ನಾವೆಲ್ಲ ಅವರ ಹೆಸರಿನಲ್ಲಿ ತಿಂದು, ಉಂಡು, ಆನಂದವಾಗಿದ್ದೇವೆ.

'ಶ್ರೀಶಾರದಾದೇವಿ ವಚನವೇದ' ದಿಂದ, ಪು.೧೯೧–೨೦೬